**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**12.12.2025 07.35 a.m.**
**<><><><>**

ಮುಖ್ಯಾಂಶಗಳು

೧. ಮಣಿಪುರದಲ್ಲಿ ೧ ಸಾವಿರದ ೩೮೭ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

೨. ಪ್ರಧಾನಿ ನರೇಂದ್ರ ಮೋದಿ ಇದೇ ೧೫ ರಿಂದ ಜೋರ್ಡಾನ್, ಇಥಿಯೋಪಿಯಾ, ಓಮನ್‌ಗೆ ನಾಲ್ಕು ದಿನಗಳ ಭೇಟಿ

೩. ಬಾಲ್‌ಘಾಟ್‌ನಲ್ಲಿ ಇಬ್ಬರ ನಕ್ಸಲರ ಶರಣಾಗತಿ : ಮಧ್ಯಪ್ರದೇಶ ನಕ್ಸಲ್ ಮುಕ್ತ

೪. ಎಸಿಸಿ ೧೯ ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿ ಇಂದು ದುಬೈನಲ್ಲಿ ಆರಂಭ

**<><><><>**

ಮಣಿಪುರದ ಇಂಫಾಲ್‌ನ ಸಿಟಿ ಕನ್ವೆನ್ಷನ್ ಸೆಂಟರ್‌ನಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ೧ ಸಾವಿರದ ೩೮೭ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ಮತ್ತು ಉದ್ಘಾಟನೆ ನೆರವೇರಿಸಿದರು. ಅವರು ಮಣಿಪುರಕ್ಕೆ ಎರಡು ದಿನಗಳ ಭೇಟಿ ನೀಡಿದ್ದಾರೆ. ರಾಷ್ಟ್ರಪತಿಗಳು ೧ ಸಾವಿರದ ೧೮೦ ಕೋಟಿ ರೂಪಾಯಿ ಮೌಲ್ಯದ ೧೪ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು ಮತ್ತು ೨೦೭ ಕೋಟಿ ರೂಪಾಯಿ ಮೌಲ್ಯದ ೧೨ ಯೋಜನೆಗಳನ್ನು ಉದ್ಘಾಟಿಸಿದರು. ಆರೋಗ್ಯ ವಲಯ, ಶಿಕ್ಷಣ, ರಸ್ತೆ ಮತ್ತು ಹೆದ್ದಾರಿಗಳು, ಬುಡಕಟ್ಟು ಅಭಿವೃದ್ಧಿ, ಕೃಷಿ, ವಿದ್ಯುತ್, ಭದ್ರತೆ ಮತ್ತು ಆಡಳಿತಾತ್ಮಕ ಕ್ರೀಡೆ, ಮೂಲಸೌಕರ್ಯ, ಕುಡಿಯುವ ನೀರು ಸೇರಿದಂತೆ ವಿವಿಧ ಕ್ಷೇತ್ರದ ಯೋಜನೆಗಳಿಗೆ ರಾಷ್ಟ್ರಪತಿ ಚಾಲನೆ ನೀಡಿದರು.ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮಣಿಪುರದ ಇಂಫಾಲ್‌ನಲ್ಲಿರುವ ನೂಪಿ ಲಾಲ್ ಸ್ಮಾರಕ ಸಂಕೀರ್ಣಕ್ಕೆ ಭೇಟಿ ನೀಡಲಿದ್ದು, ಮಣಿಪುರದ ಮಹಿಳಾ ಯೋಧರಿಗೆ ಗೌರವ ನಮನ

ಸಲ್ಲಿಸಲಿದ್ದಾರೆ ಮತ್ತು ರಾಜ್ಯಕ್ಕೆ ಅವರ ಐತಿಹಾಸಿಕ ಕೊಡುಗೆಯನ್ನು ಸ್ಮರಿಸಲಿದ್ದಾರೆ. ನಂತರ ಅವರು ಸೇನಾಪತಿಗೆ ತೆರಳಲಿದ್ದಾರೆ, ಅಲ್ಲಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ವಿವಿಧ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಿದ್ದಾರೆ

<><><><>

ಪ್ರಧಾನಿ ನರೇಂದ್ರ ಮೋದಿ ಇದೇ ೧೫ ರಿಂದ ಜೋರ್ಡಾನ್, ಇಥಿಯೋಪಿಯಾ ಮತ್ತು ಓಮನ್‌ಗೆ ನಾಲ್ಕು ದಿನಗಳ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಮೊದಲ ಚರಣದಲ್ಲಿ, ಜೋರ್ಡಾನ್ ರಾಜ ಎರಡನೇ ಅಬ್ದುಲ್ಲಾ ಬಿನ್ ಅಲ್ ಹುಸೇನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಜೋರ್ಡಾನ್‌ಗೆ ಪ್ರಯಾಣಿಸಲಿದ್ದಾರೆ. ಈ ವೇಳೆ ಪ್ರಧಾನಿ, ಭಾರತ ಮತ್ತು ಜೋರ್ಡಾನ್ ನಡುವಿನ ಸಂಬಂಧಗಳ ಪರಿಶೀಲನೆ ಮತ್ತು ಪ್ರಾದೇಶಿಕ ವಿಷಯಗಳ ಕುರಿತು ದೃಷ್ಟಿಕೋನಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ಎರಡೂ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ ೭೫ನೇ ವಾರ್ಷಿಕೋತ್ಸವ ಸಂದರ್ಭ ಈ ಭೇಟಿಯು ಭಾರತ-ಜೋರ್ಡಾನ್ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸಲು, ಪರಸ್ಪರ ಬೆಳವಣಿಗೆ ಮತ್ತು ಸಮೃದ್ಧಿಗಾಗಿ ಸಹಯೋಗದ ಹೊಸ ಮಾರ್ಗಗಳನ್ನು ಅನ್ವೇಷಿಸಲು ಮತ್ತು ಪ್ರಾದೇಶಿಕ ಶಾಂತಿ, ಸಮೃದ್ಧಿ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತೇಜಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಅವಕಾಶವನ್ನು ಒದಗಿಸುತ್ತದೆ. ಇದೇ ೧೬ ರಂದು, ಪ್ರಧಾನಿ, ಇಥಿಯೋಪಿಯಾಕ್ಕೆ ತೆರಳಲಿದ್ದು, ಆ ದೇಶಕ್ಕೆ ಅವರ ಮೊದಲ ಭೇಟಿಯಾಗಿದೆ. ಇಥಿಯೋಪಿಯ ಪ್ರಧಾನಿ ಡಾ. ಅಬಿ ಅಹ್ಮದ್ ಅಲಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಭೇಟಿ ನೀಡಲಿದ್ದು, ಇದು ಸ್ನೇಹ ಮತ್ತು ದ್ವಿಪಕ್ಷೀಯ ಸಹಕಾರದ ನಿಕಟ ಸಂಬಂಧಗಳನ್ನು ಮುನ್ನಡೆಸಲು ಎರಡೂ ರಾಷ್ಟ್ರಗಳ ಪರಸ್ಪರ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಇದೇ ೧೭ ರಂದು ಪ್ರಾರಂಭವಾಗುವ ತಮ್ಮ ಭೇಟಿಯ ಅಂತಿಮ ಚರಣದಲ್ಲಿ, ಪ್ರಧಾನಿ, ಒಮಾನ್‌ನ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅವರ ಆಹ್ವಾನದ ಮೇರೆಗೆ ಒಮಾನ್‌ಗೆ ತೆರಳಲಿದ್ದಾರೆ. ಇದು ಪ್ರಧಾನಿ ಮೋದಿಯವರ ಎರಡನೇ ಒಮಾನ್ ಭೇಟಿಯಾಗಲಿದೆ. ಭಾರತ ಮತ್ತು ಒಮಾನ್ ಶತಮಾನಗಳಷ್ಟು ಹಳೆಯದಾದ ಸ್ನೇಹ, ವ್ಯಾಪಾರ ಸಂಪರ್ಕಗಳು ಮತ್ತು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಹಂಚಿಕೊಳ್ಳುತ್ತವೆ. ಈ ಭೇಟಿಯು ಎರಡೂ ದೇಶಗಳ ನಡುವಿನ ರಾಜತಾಂತ್ರಿಕ

ಸಂಬಂಧಗಳ ಸ್ಥಾಪನೆಯ ೭೦ ವರ್ಷಗಳನ್ನು ಗುರುತಿಸುತ್ತದೆ. ಈ ಭೇಟಿಯು ವ್ಯಾಪಾರ, ಹೂಡಿಕೆ, ಇಂಧನ, ರಕ್ಷಣೆ, ಭದ್ರತೆ, ತಂತ್ರಜ್ಞಾನ, ಕೃಷಿ ಮತ್ತು ಸಂಸ್ಕೃತಿ ಕ್ಷೇತ್ರಗಳನ್ನು ಒಳಗೊಂಡಂತೆ ದ್ವಿಪಕ್ಷೀಯ ಪಾಲುದಾರಿಕೆಯನ್ನು ಸಮಗ್ರವಾಗಿ ಪರಿಶೀಲಿಸಲು ಹಾಗೂ ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಎರಡೂ ಕಡೆಯವರಿಗೆ ಅವಕಾಶವನ್ನು ಒದಗಿಸುತ್ತದೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ರಾತ್ರಿ ತಮ್ಮ ಅಧಿಕೃತ ನಿವಾಸದಲ್ಲಿ ಎಲ್ಲಾ ಎನ್‌ಡಿಎ ಸಂಸದರಿಗೆ ವಿಶೇಷ ಭೋಜನ ಕೂಟವನ್ನು ಆಯೋಜಿಸಿದ್ದರು. ಸಾಮಾಜಿಕ ಜಾಲತಾಣದಲ್ಲಿ ಅವರು, ಎನ್‌ಡಿಎ ಕುಟುಂಬವು ಉತ್ತಮ ಆಡಳಿತ, ರಾಷ್ಟ್ರೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಆಕಾಂಕ್ಷೆಗಳಿಗೆ ಹಂಚಿಕೆಯ ಬದ್ಧತೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದ್ದಾರೆ. ಮುಂದಿನ ವರ್ಷಗಳಲ್ಲಿ ರಾಷ್ಟ್ರದ ಅಭಿವೃದ್ಧಿ ಪಯಣವನ್ನು ಬಲಪಡಿಸಲು ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸುವುದಾಗಿ ಅವರು ಹೇಳಿದರು.

<><><>

ಭಾರತ ಮತ್ತು ಲೈಬೀರಿಯಾ ಪರಸ್ಪರ ಹಂಚಿಕೆಯ ಗುಣಮಟ್ಟದ ಮಾನದಂಡಗಳು ಮತ್ತು ಸಂಯೋಜನೆಯನ್ನು ಉತ್ತೇಜಿಸಲು ಫಾರ್ಮಾಕೋಪಿಯಾ ಕುರಿತ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿವೆ. ಲೈಬೀರಿಯಾದಲ್ಲಿನ ಭಾರತದ ರಾಯಭಾರಿ ಮನೋಜ್ ಬಿಹಾರಿ ವರ್ಮಾ ಮತ್ತು ಲೈಬೀರಿಯಾದ ಆರೋಗ್ಯ ಸಚಿವ ಡಾ. ಲೂಯಿಸ್ ಎಂ. ಕ್ಪೋಟೊ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ಈ ಒಪ್ಪಂದವು ಸುರಕ್ಷಿತ ಮತ್ತು ಕೈಗೆಟುಕುವ ಔಷಧಿಗಳಿಗೆ ಸುಧಾರಿತ ಪ್ರವೇಶವನ್ನು ಬೆಂಬಲಿಸುತ್ತದೆ ಎಂದು ಸಚಿವಾಲಯ ಹೇಳಿದೆ.

<><><>

ಮಧ್ಯಪ್ರದೇಶದ ಬಾಲಘಾಟ್ ಜಿಲ್ಲೆಯಲ್ಲಿ ಇಬ್ಬರು ಮಾವೋವಾದಿಗಳು ಶರಣಾದ ನಂತರ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ರಾಜ್ಯವನ್ನು ನಕ್ಸಲಿಸಂ ಮುಕ್ತ ಎಂದು ಘೋಷಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ ೨೦೨೬ ರ ವೇಳೆಗೆ ದೇಶದಿಂದ ನಕ್ಸಲಿಸಂ ಅನ್ನು ನಿರ್ಮೂಲನೆ ಮಾಡುವ

ದೃಢಸಂಕಲ್ಪದಿಂದಾಗಿ ಇದು ಸಾಧ್ಯವಾಯಿತು ಎಂದು ಅವರು ಹೇಳಿದರು. ಬಾಲಘಾಟ್‌ನಲ್ಲಿ ನಕ್ಸಲೀಯರ ಶರಣಾಗತಿಗೆ ಸಂಬಂಧಿಸಿದ 'ಪುನರ್ವಸತಿಯಿಂದ ಪುನರುಜ್ಜೀವನ' ಅಭಿಯಾನದ ಅಡಿಯಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಭೋಪಾಲ್‌ನಿಂದ ವೀಡಿಯೊ ಕಾನ್ಫರೆನ್ಸ್ ಮೂಲಕ ಮುಖ್ಯಮಂತ್ರಿ ಉದ್ದೇಶಿಸಿ ಮಾತನಾಡಿದರು.

<><><>

ತಿರುವನಂತಪುರಂನಲ್ಲಿ ಇಂದು ೩೦ನೇ ಕೇರಳ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ಆನ್‌ಮೇರಿ ಜಾಸಿರ್ ಅವರ ಉದ್ಘಾಟನಾ ಚಿತ್ರ 'ಪ್ಯಾಲೆಸ್ಟೈನ್ ೩೬' ನೊಂದಿಗೆ ಪ್ರಾರಂಭವಾಗಲಿದೆ. 'ಪ್ಯಾಲೆಸ್ಟೈನ್ ೩೬' ವ್ಯಾಪಕ ಮೆಚ್ಚುಗೆಯನ್ನು ಗಳಿಸಿದ್ದು, ಟೋಕಿಯೋ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದಿದೆ. ಇದೇ ೧೨ ರಿಂದ ೧೯ ರವರೆಗೆ ನಡೆಯಲಿರುವ ಈ ಚಲನಚಿತ್ರೋತ್ಸವವು ಸಮಕಾಲೀನ ಮತ್ತು ಐತಿಹಾಸಿಕ ಸಿನೆಮಾದ ಎಂಟು ದಿನಗಳ ದೃಶ್ಯ ಹಬ್ಬವನ್ನು ನೀಡಲು ಸಜ್ಜಾಗಿದೆ ಎಂದು ಕಾರ್ಯಕ್ರಮದ ಆಯೋಜಕರಾದ ಕೇರಳ ರಾಜ್ಯ ಚಲನಚಿತ್ರ ಅಕಾಡೆಮಿ ತಿಳಿಸಿದೆ.

<><><>

ಆಸ್ಟ್ರಿಯಾ ೧೪ ವರ್ಷದೊಳಗಿನ ಬಾಲಕಿಯರ ಶಾಲೆಗಳಲ್ಲಿ ಹಿಜಾಬ್ ನಿಷೇಧಿಸುವ ಕಾನೂನನ್ನು ಅಂಗೀಕರಿಸಿದೆ. ಈ ಕ್ರಮವು ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡರಲ್ಲೂ ಅನ್ವಯಿಸುತ್ತದೆ. ಹೊಸ ಕಾನೂನಿನ ನಿಯಮಗಳ ಪ್ರಕಾರ ೧೪ ವರ್ಷದೊಳಗಿನ ಹುಡುಗಿಯರು ಹಿಜಾಬ್ ಅಥವಾ ಬುರ್ಕಾಗಳಂತಹ ಸಾಂಪ್ರದಾಯಿಕ ಮುಸ್ಲಿಂ ತಲೆ ಹೊದಿಕೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಕಾನೂನು ಉಲ್ಲಂಘಿಸಿದರೆ ಪೋಷಕರು ೧೫೦ ರಿಂದ ೮೦೦ ಯುರೋಗಳವರೆಗೆ ದಂಡವನ್ನು ನೀಡಬೇಕಾಗುತ್ತದೆ.

<><><>

ಕೆನಡಾದ ಹೊಸ ದ್ವೇಷ ವಿರೋಧಿ ಮಸೂದೆ - ಸಿ-೯ ಅನ್ನು ತಿದ್ದುಪಡಿ ಮಾಡಲಾಗಿದೆ, ಇದು ಪವಿತ್ರ ಹಿಂದೂ, ಜೈನ ಮತ್ತು ಬೌದ್ಧ 'ಸ್ವಸ್ತಿಕ'ವನ್ನು ನಾಜಿ ಚಿತ್ರಣಗಳಿಂದ ಪ್ರತ್ಯೇಕಿಸಲು ಸಹಾಯ ಮಾಡುತ್ತದೆ. ಡಿಸೆಂಬರ್ ೧೦ ರಂದು, ನ್ಯಾಯ ಮತ್ತು ಮಾನವ ಹಕ್ಕುಗಳ ಹೌಸ್ ಆಫ್ ಕಾಮನ್ಸ್ ಸ್ಥಾಯಿ ಸಮಿತಿಯು ಮಸೂದೆಯ ಇಂಗ್ಲಿಷ್ ಆವೃತ್ತಿಯಿಂದ 'ಸ್ವಸ್ತಿಕ' ಎಂಬ ಪದವನ್ನು ತೆಗೆದುಹಾಕಲು ಸರ್ವಾನುಮತದಿಂದ ಒಪ್ಪಿಕೊಂಡಿತು. ಬಿಲ್ ಸಿ-೯ ರ 'ಮೂಲ ಕರಡು' ನಿಷೇಧಿತ

ದ್ವೇಷ ಸಂಕೇತವನ್ನು ನಾಜಿ ಹಕೆನ್‌ಕ್ರೂಜ್ ಎಂದು ವಿವರಿಸಿದೆ, ಇದನ್ನು ನಾಜಿ ಸ್ವಸ್ತಿಕ ಎಂದೂ ಕರೆಯುತ್ತಾರೆ. ಹಿಂದೂ, ಜೈನ ಮತ್ತು ಬೌದ್ಧ ಗುಂಪುಗಳು ಇದನ್ನು ಬಲವಾಗಿ ಆಕ್ಷೇಪಿಸಿದವು, ಈ ಪದಗುಚ್ಛವು ಹಿಟ್ಲರ್‌ನ ದ್ವೇಷದ ಲಾಂಛನದೊಂದಿಗೆ ತಮ್ಮ ಪ್ರಾಚೀನ, ಪವಿತ್ರ ಅದೃಷ್ಟದ ಸಂಕೇತವನ್ನು ತಪ್ಪಾಗಿ ಪ್ರತಿಬಿಂಬಿಸಿದ ಎಂದು ವಾದಿಸಿತು. ತಿದ್ದುಪಡಿ ಮಾಡಲಾದ ಪಠ್ಯವು ಈಗ 'ನಾಜಿ ಹಕೆನ್‌ಕ್ರೂಜ್' ಅಥವಾ ಕೊಕ್ಕೆಯಾಕಾರದ ಶಿಲುಬೆಯನ್ನು ಮಾತ್ರ ಉಲ್ಲೇಖಿಸುತ್ತದೆ.

<><><><>

ಏಷ್ಯನ್ ಕ್ರಿಕೆಟ್ ಸಮಿತಿ - ಎಸಿಸಿ ೧೯ ವರ್ಷದೊಳಗಿನವರ ಏಷ್ಯಾಕಪ್ ೨೦೨೫ ಇಂದು ದುಬೈನಲ್ಲಿ ಆರಂಭವಾಗಲಿದೆ. ಉದ್ಘಾಟನಾ ಪಂದ್ಯವು ಆಯುಷ್ ಮಾತ್ರೆ ನೇತೃತ್ವದ ಭಾರತ ಮತ್ತು ಆತಿಥೇಯ ಯುನೈಟೆಡ್ ಅರಬ್ ಎಮಿರೇಟ್ಸ್ ನಡುವೆ ಇಂದು ಬೆಳಿಗ್ಗೆ ದುಬೈನ ಐಸಿಸಿ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಬೆಳಿಗ್ಗೆ ೧೦:೩೦ ಕ್ಕೆ ಆರಂಭವಾಗಲಿದೆ. ವೈಭವ್ ಸೂರ್ಯವಂಶಿ ಕೂಡ ಭಾರತದ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತ ತಂಡ ಇದೇ ೧೪ ರಂದು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ.

<><><><>